DITTO WS

Reg. No. : ....................................

Name : ........................................

**FY-306**

**FIRST YEAR HIGHER SECONDARY MODEL EXAMINATION – 2021**

Part – II

**KANNADA**

Maximum : 80 Scores

Time : **2½** Hours

Cool-off time : **20** Minutes

**ವಿದ್ಯಾರ್ಥಿಗಳಿಗೆ ಸೂಚನೆಗಳು :**

- ಮೊದಲ **20** ನಿಮಿಷ 'ಕೂಲ್ ಆಫ್ ಸಮಯ' ವಾಗಿದೆ. ಪ್ರಶ್ನೆಗಳನ್ನು ಓದಿ ಅರ್ಥೈಸಿಕೊಳ್ಳುವುದಕ್ಕೂ ಉತ್ತರಗಳ ಬಗ್ಗೆ ಯೋಚಿಸುವುದಕ್ಕೂ ಈ ಸಮಯವನ್ನು ಬಳಸಿಕೊಳ್ಳಬಹುದು.
- ಪ್ರಶ್ನೆಗಳನ್ನು ಮತ್ತು ಸೂಚನೆಗಳನ್ನು ಸರಿಯಾಗಿ ಓದಿ ಅರ್ಥೈಸಿಕೊಂಡ ಮೇಲೆ ಉತ್ತರ ಬರೆಯಿರಿ.
- ಉತ್ತರ ಬರೆಯುವಾಗ ಅಂಕ, ಸಮಯ ಮೊದಲಾದವುಗಳನ್ನು ಪರಿಗಣಿಸಬೇಕು.
- ಕೊಟ್ಟಿರುವ ಸೂಚನೆಗಳನ್ನು ಗಮನವಿಟ್ಟು ಓದಿರಿ.

**1 ರಿಂದ 4 ರ ವರೆಗಿನ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆವರಣದಿಂದ ಆರಿಸಿ ಬರೆಯಿರಿ.** **(4 × 1 = 4)**

1. ಕುವೆಂಪು ರವರ ಯಾವ ಕೃತಿಗೆ ಜ್ಞಾನಪೀಠ ಪ್ರಶಸ್ತಿ ಲಭಿಸಿದೆ ?

   (ಪಕ್ಷಿಕಾಶಿ, ನೆನಪಿನ ದೋಣಿಯಲ್ಲಿ, ಮಲೆಗಳಲ್ಲಿ ಮದುಮಗಳು, ಶ್ರೀ ರಾಮಾಯಣ ದರ್ಶನಂ)

2. ರವಿಸುತ ಎಂದರೆ ಯಾರು ?

   (ಕೃಷ್ಣ, ಕರ್ಣ, ದುರ್ಯೋಧನ, ಭೀಮ)

3. ಇದ್ಯ ಬಲ್ಲವಗೆ ಭಯವುಂಟೆ – ಈ ಪಾಠವು ಯಾವ ಕಾವ್ಯ ಪ್ರಕಾರಕ್ಕೆ ಸೇರುತ್ತದೆ ?

   (ರಗಳೆ, ಜನಪದಗೀತೆ, ಸಾಂಗತ್ಯ, ಷಟ್ಪದಿ)

4. ‘ಎಲ್ಲಿಗೊಕ್ಕೀ ನಿಮ್ಮಪ್ಪ ಸಾಲಕ್ಕ ನಿನ್ ಸಂಬ್ಳ ಇಟ್ಟಾನ’ – ಈ ಮಾತನ್ನು ಹೇಳಿದವರು ಯಾರು ?

(ಬಸವ, ಚಂದ್ರ, ಸೊಚ್ಚ, ಗೌಡ)

**5 ರಿಂದ 12 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿರಿ. (4 × 1 = 4)**

5. ನಿನದ – ಈ ಪದದ ಅರ್ಥವನ್ನು ಬರೆಯಿರಿ.

6. ಕಾದೆನಾದೊಡೆ – ಈ ಪದವನ್ನು ವಿಂಗಡಿಸಿ ಬರೆಯಿರಿ.

7. ಸುಖ – ಈ ಸಂಸ್ಕೃತ ಪದದ ತದ್ಭವ ರೂಪವನ್ನು ಬರೆಯಿರಿ.

8. ಭೂಮಿ – ಈ ಪದಕ್ಕೆ ಒಂದು ಪರ್ಯಾಯ ಪದವನ್ನು ಕೊಡಿರಿ.

9. ‘ಪ್ರತಿಧ್ವನಿ ಪದ’ ಗಳಿಗೆ ಒಂದು ಉದಾಹರಣೆಯನ್ನು ಕೊಡಿರಿ.

10. ಸಮರ್ಥ – ಈ ಪದದ ನಿಷೇದಾರ್ಥ ರೂಪವನ್ನು ಬರೆಯಿರಿ.

11. ಪ್ರವೀಣ – ಈ ಪದದ ಭಾವನಾಮ ರೂಪವನ್ನು ಬರೆಯಿರಿ.

12. ತದ್ದಿತ ಪ್ರತ್ಯಯಕ್ಕೆ ಒಂದು ಉದಾಹರಣೆಯನ್ನು ಕೊಡಿರಿ.

DITTO
WS

**13 ರಿಂದ 18 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿರಿ.** **(3 × 3 = 9)**

13. ಕೆಳಗೆ ಕೊಡಲಾದ ಮಿಶ್ರವಾಕ್ಯವನ್ನು ಮೂರು ಸರಳ ವಾಕ್ಯಗಳಾಗಿ ಬರೆಯಿರಿ.

ಬಸವನು ತಟ್ಟೆಯನ್ನು ಹಿಡಕೊಂಡು ಹೋದಾಗ ಅವನ ಅಮ್ಮ ಹುಗ್ಗಿಯನ್ನು ಬಡಿಸಿ ಇನ್ನು ಪುನಃ ಬರಬೇಡವೆಂದು ಹೇಳಿ ಕಳುಹಿಸಿದಳು.

14. ಕೆಳಗೆ ನೀಡಲಾದ ಪದ್ಯಭಾಗದ ಸ್ವಾರಸ್ಯವನ್ನು ಬರೆಯಿರಿ.

ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು ।
ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ ।
ಬೆಲ್ಲ ಸಕ್ಕರೆಯಾಗು ದೀನದುರ್ಬಲರಿಂಗೆ
ಎಲ್ಲರೊಳಗೊಂದಾಗು ಮಂಕುತಿಮ್ಮ

15. ನಿದ್ದಿ, ಇದ್ಯ, ಹೊಳೆದಂಡಿ, ಕಂದಯ್ನ, ತಂದೀಯ, ಇಂಗೋಗ್ಲಿ – ಈ ಪದಗಳ ಶಿಷ್ಟರೂಪವನ್ನು ಬರೆಯಿರಿ.

16. ಕೆಳಗೆ ಕೊಟ್ಟ ಗಾದೆ ಮಾತಿನ ಆಶಯವನ್ನು ವಿಸ್ತರಿಸಿ ಬರೆಯಿರಿ.

ತುಂಬಿದ ಕೊಡ ತುಳುಕುವುದಿಲ್ಲ

17. ಅಂಡಮಾನಿನಲ್ಲಿ ಲೇಖಕರು ಕಂಡ ರೆಡ್ ಸ್ಕಿನ್ ಹವಳ ದ್ವೀಪದ ವೈಶಿಷ್ಟ್ಯಗಳನ್ನು ಬರೆಯಿರಿ.

18. 'ಮನುಷ್ಯರು ಬುದ್ಧಿವಂತರಾಗ್ತಿರೋ ಲಕ್ಷಣ ಕಾಣಿಸ್ತಿದೆ !' – ಬಕ ನಾಟಕದಲ್ಲಿ ಬಂದಿರುವ ಈ ಮಾತಿನ ಸಂದರ್ಭವನ್ನು ತಿಳಿಸಿರಿ.

**19 ರಿಂದ 25 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿರಿ.** **(3 × 4 = 12)**

19. ಸರಿ ಹೊಂದಿಸಿ ಬರೆಯಿರಿ.

| 'ಅ' ವಿಭಾಗ | 'ಆ' ವಿಭಾಗ |
|---|---|
| ಕುಂ. ವೀರಭದ್ರಪ್ಪ | ಮಂಕುತಿಮ್ಮನ ಕಗ್ಗ |
| ಡಾ. ಎಚ್.ಎಲ್. ಪುಷ್ಪ | ಹುಗ್ಗಿ |
| ರಹಮತ್ ತರೀಕೆರೆ | ಸುನಾಮಿಯ ಹಾಡು |
| ಡಿ.ವಿ. ಗುಂಡಪ್ಪ | ಕಡಲ ಒಡಲು |

20. ತಂದೆ ಮತ್ತು ತಾಯಿಯ ಬಗೆಗಿನ ಪ್ರೀತಿ ಜನಪದ ಗೀತೆಗಳಲ್ಲಿ ವ್ಯಕ್ತವಾದ ಬಗೆಯನ್ನು ತಿಳಿಸಿರಿ.

21. ಕೆಳಗೆ ಕೊಡಲಾದ ಪದ್ಯದ ಆಶಯವನ್ನು ಬರೆಯಿರಿ.

ಲಲನೆ ಪಡೆದೀಯೈದು ಮಂತ್ರಂ

ಗಳಲಿ ಮೊದಲಿಗ ನೀನು ನಿನ್ನಯ

ಬಳಿ ಯುಧಿಷ್ಠಿರ ದೇವ ಮೂರನೆಯಾತ ಕಲಿಭೀಮ

ಫಲುಗುಣನು ನಾಲ್ಕನೆಯಲೈದನೆ

ಯಲಿ ನಕುಲ ಸಹದೇವರಾದರು

ಬಳಿಕ ಮಾದ್ರಿಯಲೊಂದು ಮಂತ್ರದೊಳಿಬ್ಬರುದಿಸಿದರು

22. ವಿಶ್ವಕ್ಕೆ ಅಳಿವಿಲ್ಲ – ಎಂಬುವುದನ್ನು ಮಂಕುತಿಮ್ಮನ ಕಗ್ಗದಲ್ಲಿ ಸಮರ್ಥಿಸಿದ ರೀತಿಯನ್ನು ತಿಳಿಸಿರಿ.

23. ಶೇಣಿಯವರಲ್ಲಿ ರಾವಣನ ವ್ಯಕ್ತಿತ್ವವು ಪಡೆದ ವಿವಿಧ ಆಯಾಮಗಳ ಬಗ್ಗೆ ಕಿರು ಟಿಪ್ಪಣಿ ಬರೆಯಿರಿ.

24. ಭೂತಾರಾಧನೆ ಹಾಗೂ ತೆಯ್ಯಂಗಳ ನಡುವಣ ಇರುವ ಸಾಮ್ಯ – ವ್ಯತ್ಯಾಸಗಳನ್ನು ಬರೆಯಿರಿ.

25. ಕೋಪವು ಉಂಟು ಮಾಡಬಲ್ಲ ದುಷ್ಪರಿಣಾಮಗಳನ್ನು ಬಸವಣ್ಣನ ವಚನಗಳ ಆಧಾರದಲ್ಲಿ ಸ್ಪಷ್ಟಪಡಿಸಿರಿ.

**26 ರಿಂದ 39 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಏಳು ಪ್ರಶ್ನೆಗಳಿಗೆ ಅರ್ಧ ಪುಟಕ್ಕೆ ಕಡಿಮೆಯಾಗದಂತೆ ಉತ್ತರ ಬರೆಯಿರಿ.** **(7 × 5 = 35)**

26. ವಸಂತಕಾಲದ ಪ್ರಕೃತಿಯ ವೈಭವವು 'ಸುಗ್ಗಿ ಬರುತಿದೆ' ಕವಿತೆಯಲ್ಲಿ ಮೂಡಿ ಬಂದ ಬಗೆಯನ್ನು ವಿವರಿಸಿರಿ.

27. 'ಇದ್ಯ ಬಲ್ಲವಗೆ ಭಯವುಂಟೆ' – ಜನಪದ ಗೀತೆಯ ಆಶಯವನ್ನು ಬರೆಯಿರಿ.

28. 'ಮನುಷ್ಯ ಎಷ್ಟೇ ಬಲಿಷ್ಠನಾಗಿ ಬೆಳೆದರೂ ನಿಸರ್ಗದೆದುರು ನಿಲ್ಲಲಾರ' – ಈ ಮಾತನ್ನು 'ಸುನಾಮಿಯ ಹಾಡು' ಕವಿತೆಯ ಆಧಾರದಲ್ಲಿ ಸಮರ್ಥಿಸಿರಿ.

29. 'ಒಸರು' ಕಥೆಯಲ್ಲಿ ನೀರಿಗಾಗಿ ಸುರಂಗ ತೋಡುವ ಖಾದ್ರಿಕಾಕನ ಪ್ರಯತ್ನ ಹಾಗೂ ಅದರಲ್ಲಿ ಕಂಡ ಯಶಸ್ಸನ್ನು ವಿವರಿಸಿರಿ.

30. 'ಮಂಕುತಿಮ್ಮನ ಕಗ್ಗ' ದಲ್ಲಿ ವ್ಯಕ್ತವಾಗುವ ಜೀವನ ಮೌಲ್ಯಗಳ ಕುರಿತು ಕಿರುಲೇಖನವೊಂದನ್ನು ಸಿದ್ಧಪಡಿಸಿರಿ.

31. 'ನಿನ್ನಯ ವೀರರ್ಕೈವರ ನೋಯಿಸೆನು' ಕಾವ್ಯಭಾಗದಲ್ಲಿ ಮೂಡಿಬಂದಿರುವ ಕರ್ಣನ ಪಾತ್ರ ಚಿತ್ರಣ ಮಾಡಿರಿ.

32. ಹುಗ್ಗಿಯ ತಯಾರಿ ಹಾಗೂ ಮಕ್ಕಳ ಉತ್ಸಾಹ ಹುಗ್ಗಿ ಕಥೆಯಲ್ಲಿ ಮೂಡಿಬಂದ ಬಗೆಯನ್ನು ವಿವರಿಸಿರಿ.

33. ಲೇಖಕರು ಅಂಡಮಾನ್ ಪ್ರವಾಸದ ಅನುಭವಗಳನ್ನು 'ಕಡಲ ಒಡಲು' ಪಾಠದಲ್ಲಿ ಸೊಗಸಾಗಿ ಚಿತ್ರಿಸಿದ್ದಾರೆ. ನಿಮ್ಮ ಪ್ರವಾಸದ ಅನುಭವಗಳನ್ನು ಕಿರು ಪ್ರವಾಸ ಕಥನ ರೂಪದಲ್ಲಿ ಬರೆಯಿರಿ.

34. ಯುದ್ಧದ ಭೀಕರತೆ 'ಬ್ಲೆನ್ ಹೀಮ್ ಕದನ' ಪಾಠದಲ್ಲಿ ವ್ಯಕ್ತವಾದ ಬಗೆಯನ್ನು ವಿವರಿಸಿರಿ.

35. ನಿಮ್ಮ ಊರಿನ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸಲು ಸಂಬಂಧಪಟ್ಟ ಅಧಿಕಾರಿಗಳ ಗಮನ ಸೆಳೆಯಲು ಮನವಿ ಪತ್ರವೊಂದನ್ನು ಸಿದ್ಧಪಡಿಸಿರಿ.

36. ಧರ್ಮಬುದ್ಧಿಯು ತನ್ನ ವ್ಯವಹಾರ ಬುದ್ಧಿಯ ಜಾಣ್ಮೆಯಿಂದ ದುಷ್ಟಬುದ್ಧಿಯ ವಂಚನೆಯನ್ನು ಬಯಲಿಗೆಳೆದ ಘಟನೆಯನ್ನು ನಿರೂಪಿಸಿರಿ.

37. 'ಮೂಢನಂಬಿಕೆಗಳ ಬೀಡಿನಲ್ಲಿ' – ಈ ಪಾಠದಲ್ಲಿ ನಿಮಗೆ ಮೆಚ್ಚುಗೆಯಾದ ಸನ್ನಿವೇಶದ ಸ್ವಾರಸ್ಯವನ್ನು ನಿಮ್ಮ ಅನಿಸಿಕೆಗಳ ರೂಪದಲ್ಲಿ ಬರೆಯಿರಿ.

38. ಪರಿಸರವನ್ನು ಉಳಿಸಿ ಬೆಳೆಸಬೇಕಾದುದು ನಮ್ಮೆಲ್ಲರ ಕರ್ತವ್ಯವಲ್ಲವೆ ? 'ಪರಿಸರ ಸಂರಕ್ಷಣೆ' ಯ ಕುರಿತು ಪ್ರಬಂಧವೊಂದನ್ನು ಸಿದ್ಧಪಡಿಸಿರಿ.

39. ಅಭಯರುಚಿ – ಅಭಯಮತಿಯರು ಪರಸ್ಪರ ಸಂತೈಸಿಕೊಳ್ಳುವ ಸನ್ನಿವೇಶವನ್ನು ವಿವರಿಸಿರಿ.

**40** ರಿಂದ **43** ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಒಂದು ಪುಟಕ್ಕೆ ಕಡಿಮೆಯಾಗದಂತೆ ಉತ್ತರ ಬರೆಯಿರಿ. **(2 × 8 = 16)**

40. "ನಿನ್ನಯ ವೀರರೈವರ ನೋಯಿಸೆನು" ಕಾವ್ಯಭಾಗದಲ್ಲಿ ಕೃಷ್ಣ – ಕರ್ಣರ ಭೇಟಿಯ ಸ್ವಾರಸ್ಯವನ್ನು ವಿವರಿಸಿರಿ.

41. ಬಡತನದ ಘೋರಚಿತ್ರಣ 'ಹುಗ್ಗಿ' ಕಥೆಯಲ್ಲಿ ಮೂಡಿ ಬಂದ ಬಗೆಯನ್ನು ವಿವರಿಸಿರಿ.

42. ಅಂಡಮಾನಿನ ಕಡಲಿನಾಳದಲ್ಲಿರುವ ಅಪೂರ್ವ ಜೀವಿಗಳ ವರ್ಣನೆಯ ಸೊಬಗನ್ನು ನಿಮ್ಮ ಅನಿಸಿಕೆಗಳೊಂದಿಗೆ ವಿವರಿಸಿ ಬರೆಯಿರಿ.

43. 'ಬಕ' ನಾಟಕವು ಪುರಾಣದ ಚೌಕಟ್ಟಿನಲ್ಲಿ ಮೂಡಿಬಂದ ವರ್ತಮಾನ ಸಮಾಜದ ಸ್ಥಿತಿಗತಿಗಳ ಪ್ರತಿಫಲನವಾಗಿದೆ – ಈ ಮಾತನ್ನು ಸಮರ್ಥಿಸಿರಿ.